# ಮೆಟಾವರ್ಸ್ ಮಾಯಾಜಾಲ!

■ ಕರ್ಕಿ ಕೃಷ್ಣಮೂರ್ತಿ

‘ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ’ ಎಂಬ ಕನಕದಾಸರ ಮಾತು ಎಲ್ಲರ ಅನುಭವವಾಗುವ ಕಾಲ ನಮ್ಮೆದುರಿಗೇ ಬಂದಿದೆ. ಆದರೆ ದಾಸರು ಹೇಳಿದ ಪಾರಮಾರ್ಥಿಕ ಅರ್ಥದಲ್ಲಲ್ಲ; ಜಾಗತಿಕ ‘ಅರ್ಥ’ಪ್ರಧಾನ ವ್ಯಾಪಾರಿ ಮಾರುಕಟ್ಟೆಯಲ್ಲಿ. ‘ಮೆಟಾವರ್ಸ್’ ಎಂಬುದು ಇತ್ತೀಚೆಗೆ ಬಹುಜನಪ್ರಿಯವಾಗುತ್ತಿರುವ ಶಬ್ದ. ಈ ಶಬ್ದದ ಬೋರ್ಡ್ ಹೊತ್ತುಕೊಂಡು ದೊಡ್ಡ ಮಾರುಕಟ್ಟೆಯ ಜಾಲವೇ ನಮ್ಮ ಬದುಕನ್ನು ಪ್ರವೇಶಿಸಲು ಹೊಂಚುಹಾಕುತ್ತಿದೆ. ಮೇಲ್ನೋಟಕ್ಕೆ ಹಲವು ಆಕರ್ಷಣೆಗಳನ್ನು ಒಳಗೊಂಡಿರುವ ಮೆಟಾವರ್ಸ್‌ಗೆ ಹಲವು ಆಯಾಮಗಳಿವೆ. ಒಳಿತು–ಕೆಡುಕು ಎಂದು ನಿರ್ದಿಷ್ಟವಾಗಿ ಗೆರೆ ಎಳೆದು ಹೇಳಲು ಸಾಧ್ಯವಿಲ್ಲದ ಪ್ರಭಾವಲಯವಿದೆ. ಮುಂದಿನ ದಿನಗಳಲ್ಲಿ ನಮ್ಮೆಲ್ಲರ ಬದುಕಿನ ಭಾಗವೇ ಆಗಲಿರುವ ಮೆಟಾವರ್ಸ್ ಮಾಯಾಜಾಲದ ಕುರಿತು ಪರಿಚಯಿಸುವ ಈ ಲೇಖನ, ಅದರ ಪರಿಣಾಮಗಳನ್ನು ಕೂಡ ಬಹುಸೂಕ್ಷ್ಮವಾಗಿ ಮನಗಾಣಿಸುತ್ತದೆ.